**ಅ.ದಾವಾ 213/2020** **ಪಿ.ಡಬ್ಲ್ಯೂ- 3**

**ದಿನಾಂಕಃ 27/03/2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.**

**ಪಾಟೀಸವಾಲುಃ- ಶ್ರೀ ಜೆ.ಯು.ಆರ್. ವಕೀಲರಿಂದ**

1ನೇ ವಾದಿ ಹಾಗೂ ಪ್ರತಿವಾದಿಯ ಜಮೀನನ್ನು ನಾನು ನೋಡಿರುತ್ತೇನೆ. 1ನೇ ವಾದಿಗೆ 2 ಎಕರೆ 3 ಗುಂಟೆ ಜಮೀನು ಇರುತ್ತದೆ. ಪ್ರತಿವಾದಿಗೆ ಎಷ್ಟು ಜಮೀನು ಇರುತ್ತದೆ ಎಂದು ನನಗೆ ಗೊತ್ತಿಲ್ಲ. 1ನೇ ವಾದಿಗೆ ಸರ್ವೆ ನಂ. 190/1 ರಲ್ಲಿ 19 ಗುಂಟೆ, 190/3 ರಲ್ಲಿ 21 ಗುಂಟೆ ಜಮೀನು ಇರುತ್ತದೆ. ಉಳಿದ ಜಮೀನಿನ ಸರ್ವೆ ನಂಬರ್ ನನಗೆ ಗೊತ್ತಿಲ್ಲ. ಸದರಿ 2 ಎಕರೆ 3 ಗುಂಟೆ ಜಮೀನಿನ ಪೂರ್ವಕ್ಕೆ ಜಯಲಿಂಗಪ್ಪ ರವರ ಜಮೀನು, ಪಶ್ಚಿಮಕ್ಕೆ ನೀರು ಹರಿಯುವ ಹಳ್ಳ, ಉತ್ತರಕ್ಕೆ ಜಯಲಿಂಗಪ್ಪ ರವರ ಜಮೀನು, ದಕ್ಷಿಣಕ್ಕೆ ಇಷ್ಟಲಿಂಗಪ್ಪ ರವರ ಜಮೀನು ಇರುತ್ತದೆ. ಈ ಹಿಂದೆ ಈ ದಾವೆಯ ಪ್ರತಿವಾದಿ ನನ್ನ ವಿರುದ್ಧ ಕ್ರಿಮಿನಲ್ ಪ್ರಕರಣವನ್ನು ದಾಖಲಿಸಿದ್ದರು ಎಂದರೆ ಸರಿ. ಸದರಿ ಪ್ರಕರಣ ರಾಜೀಯಾಗಿರುತ್ತದೆ ಎಂದರೆ ಸರಿ. ಈಗ 1ನೇ ಹಾಗೂ ಪ್ರತಿವಾದಿಯ ಮಧ್ಯೆ ಜಗಳವಾಗಿ ಕ್ರಿಮಿನಲ್ ಪ್ರಕರಣ ಇರುತ್ತದೆ ಎಂದರೆ ಸರಿ.

2. ವಿವಾದಿತ ಜಮೀನಿನ ಪಶ್ಚಿಮಕ್ಕೆ ನನ್ನ ಜಮೀನು ಇರುತ್ತದೆ. ನನ್ನ ಜಮೀನಿನ ಸರ್ವೆ ನಂ. 6/3 ಹಾಗೂ ಸರ್ವೆ ನಂ. 6/4. ಈ ದಾವೆಯ ಬಗ್ಗೆ ನನಗೆ ಯಾವುದೇ ವಿಚಾರಗಳು ಗೊತ್ತಿಲ್ಲದಿದ್ದರೂ ಕೂಡ 1ನೇ ವಾದಿಯ ಪರವಾಗಿ ಸುಳ್ಳು ಸಾಕ್ಷ್ಯ ನುಡಿಯಲು ಬಂದಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ- ಇಲ್ಲ.**

(ಬಹಿರಂಗ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೆ.ಸ.ಇ.

ಜೆ.ಎಂ.ಎಫ್.ಸಿ., ಹೊಳೆನರಸೀಪುರ.